ಶ್ರೀ ಜಿ. ಬಸವಣ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ವೈಸೂರಿನ ಚೆಲುವಾಂಬ ಆಸ್ಪತ್ರೆ ಪ್ರಾರಂಭವಾಗಿದ್ದು ೧೮೮೦ರಲ್ಲಿ ಆ ದಿನದಿಂದ ಇದ್ದ ಹಾಸಿಗೆಗಳ ಸಂಖ್ಯೆ ಮತ್ತು ರೋಗಿಗಳ ಪ್ರಮಾಣದ ವಿವರಗಳು ಲಭ್ಯವಿಲ್ಲ. ೧೯೮೦ ರಿಂದ ಇಲ್ಲಿಯವರೆಗಿನ ರೋಗಿಗಳ ಸಂಖ್ಯೆಯನ್ನು ಈ ಕೆಳಗೆ ಕೊಟ್ಟಿದೆ.

	೧೯೮೦-೮೧	೧೯೮೭-೮೮
ಒಳ ರೋಗಿಗಳು	೧೨,೦೮೫	೧೬,೩೨೭
ಹೊರ ರೋಗಿಗಳು	೭೬,೭೩೬	೧,೨೨,೨೪೭

ಆಸ್ಪತ್ರೆಯಲ್ಲಿ ಈಗಿನ ಹಾಸಿಗೆಗಳ ಸಂಖ್ಯೆ ೪೦೦ ಇದೆ.

ಆ) ರೋಗಿಗಳ ಪ್ರಮಾಣ ಹೆಚ್ಚಾಗುತ್ತಿದ್ದರೂ ಕಾಲಕಾಲಕ್ಕೆ ಅಗತ್ಯತೆಗಳಿಗನುಗುಣವಾಗಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈಗ ಪ್ರತಿನಿತ್ಯದ ಒಳ ರೋಗಿಗಳ ಸರಾಸರಿ ಸಂಖ್ಯೆ (Bed occupancy rate) ೪೦೦ ರಲ್ಲಿ ೩೭೬ ಇದೆ.

ಇ) ಅವಶ್ಯಕತೆ ಹಾಗೂ ಹಣದ ಲಭ್ಯತೆಯನ್ನು ಗಮನಿಸಿ ಕ್ರಮ ಕೈಗೊಳ್ಳಲಾಗುವುದು.

೧೯೮೭-೮೮ರ ಸಾಲಿನಲ್ಲಿ ಪ್ರಾರಂಭಿಸಲಾದ ಹೊಸ ಬಸ್ ನಿಲ್ದಾಣಗಳು.

೨೬೯. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭-೮೮ನೇ ಸಾಲಿನಲ್ಲಿ ಎಷ್ಟು ಹೊಸ ಬಸ್ ನಿಲ್ದಾಣಗಳಿಗೆ ಶಂಕು ಸ್ಥಾಪನೆ ಮಾಡಲಾಯಿತು. ?

ಆ) ಇವುಗಳಲ್ಲಿ ಎಷ್ಟು ನಿಲ್ದಾಣಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ?

ಇ) ಚಿಕ್ಕನಾಯಕನಹಳ್ಳಿ ಹೊಸ ಬಸ್ ನಿಲ್ದಾಣಕ್ಕೆ ಅಸ್ಥಿ ಬಾರ ಹಾಕಿ ಗುತ್ತಿಗೆ ಹಾಗೂ ದರ ಪಟ್ಟಿಗಳನ್ನು ಕರೆದಿರುವುದು ನಿಜವೇ ?

ಈ) ದರಪಟ್ಟಿಯನ್ನು ಅಂಗೀಕರಿಸಿ ಎಂದು ಕೆಲಸವನ್ನು ಪ್ರಾರಂಭಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ೬ ಬಸ್ ನಿಲ್ದಾಣಗಳಿಗೆ ಶಂಕು ಸ್ಥಾಪನೆ ಮಾಡಲಾಯಿತು.

ಆ) ಒಂದು

ಇ) ಅಸ್ಥಿ ಭಾಗ ಹಾಕಲಾಗಿದೆ ಹಾಗೂ ಟೆಂಡರ್‌ಗಳನ್ನು ಕರೆಯಲಾಗಿತ್ತು.

ಈ) ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ೧೯೮೮-೮೯ನೇ ಸಾಲಿನಲ್ಲಿ ಕೈಗೊಳ್ಳಲು ಪರಿಗಣಿಸಲಾಗುವುದು.

೧೯೮೭-೮೮ನೇ ಸಾಲಿನ ಅಬ್ಕಾರಿ ಆದಾಯ

೨೩೪. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭-೮೮ರಲ್ಲಿ ಸಾರಾಯಿ ಹರಾಜಿನಿಂದ ಬಂದಿರುವ ಒಟ್ಟು ಆದಾಯವೆಷ್ಟು ?

ಆ) ರಾಜ್ಯಕ್ಕೆ ಪ್ರತಿ ತಿಂಗಳು ಎಷ್ಟು ಸಾರಾಯಿ ಬಾಟ್ಲಿಂಗ್ ಬೇಕಾಗಿದೆ. ?

ಇ) ಸರ್ಕಾರಿ ಹಾಗೂ ಸಹಕಾರಿ ಸಾಮ್ಯದ ಡಿಸ್ಟಿಲರಿಗಳಿಗೆ ಎಷ್ಟು ಲೀಟರ್ ಬಾಟಿಂಗ್ ಮಾಡುವ ಸಾಮರ್ಥ್ಯ ಇದೆ. ?